ಅ) ಈ ಸೌಲಭ್ಯವನ್ನು ಒದಗಿಸಿಕೊಡುವಂತೆ ವೃದ್ಧರು, ಸಂಘ ಸಂಸ್ಥೆಗಳು ಸರ್ಕಾರಕ್ಕೆ ಹಲವಾರು ಮನವಿಗಳನ್ನು ಮಾಡಿಕೊಂಡಿದ್ದರೂ ಇದರ ಬಗ್ಗೆ ಯಾವುದೇ ಕ್ರಮ ಜರುಗಿಸದಿರಲು ಹಾಗೂ ಈ ಸೌಲಭ್ಯವನ್ನು ಒದಗಿಸದಿರಲು ಕಾರಣವೇನು;

ಇ) ಈ ಸೌಲಭ್ಯವನ್ನು ಒದಗಿಸಿಕೊಟ್ಟರೆ ಸರ್ಕಾರದ ಬೊಕ್ಕಸಕ್ಕೆ ಬೀಳುವ ಹೊರೆ ಎಷ್ಟು;

ಈ) ಈ ಸೌಲಭ್ಯವನ್ನು ಜಾರಿಗೆ ತಂದು ರಾಜ್ಯದ ಲಕ್ಷಾಂತರ ವೃದ್ಧರಿಗೆ ಅನುಕೂಲ ಕಲ್ಪಿಸಿ ಕೊಡುವುದು ಯಾವಾಗ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಈ ಹಿಂದೆ ಸಾರಿಗೆ ಸಂಸ್ಥೆಯು ಹಿರಿಯ ನಾಗರೀಕರಿಗೆ ತನ್ನ ನಗರ ಮತ್ತು ನಗರ ಹೊರ ವಲಯ ಸಾರಿಗೆಗಳಲ್ಲಿ ಶೇಕಡ 50 ದರ ರಿಯಾಯಿತಿ ಸೌಲಭ್ಯವನ್ನು ಒದಗಿಸಿತ್ತು. ಸಂಸ್ಥೆಯ ಕಠಿಣ ಆರ್ಥಿಕ ಪರಿಸ್ಥಿತಿಯಿಂದಾಗಿ ಸರ್ಕಾರದ ಆದೇಶ ಸಂಖ್ಯೆ ಎಫ್ ಟಿ 145 ಟಿ ಆರ್ ಎ 91, ದಿನಾಂಕ: 17-12-91 ರಂತೆ ಈ ಸೌಲಭ್ಯವನ್ನು ಹಿಂದಕ್ಕೆ ಪಡೆಯಲಾಯಿತು.

ಇ) ಸಂಸ್ಥೆಯ ನಗರ, ನಗರ ಹೊರವಲಯ ಮತ್ತು ಗ್ರಾಮಾಂತರ ಸಾರಿಗೆಗಳಲ್ಲಿ ಪ್ರತಿದಿನ ಸುಮಾರು 2 ಲಕ್ಷ ಪ್ರಯಾಣಿಕರು ಪ್ರಯಾಣಿಸುವವರೆಂದು ಅಂದಾಜು ಮಾಡಲಾಗಿ, ಶೇಕಡ 50 ರಷ್ಟು ಪ್ರಯಾಣ ದರ ರಿಯಾಯಿತಿ ನೀಡಿದಲ್ಲಿ ಸಂಸ್ಥೆಯ ಮೇಲೆ ವಾರ್ಷಿಕ 102 ಕೋಟಿ ರೂಪಾಯಿಗಳ ಆರ್ಥಿಕ ಹೊರೆ ಉಂಟಾಗುತ್ತದೆ.

ಈ) ಈ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಅಕ್ರಮ ಸಂಭಾವನೆ

892 (989) ಶ್ರೀ ಸಿ.ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರದಲ್ಲಿ ಸ್ಟಾಂಪ್ ವೆಂಡರ್ ಪರವಾನಗಿ ಪಡೆದಿರುವವರ ಸಂಖ್ಯೆ ಎಷ್ಟು;

ಸ್ಟಾಂಪ್ ವೆಂಡರ್ ಪರವಾನಗಿದಾರರು ಪರವಾನಗಿಯನ್ನು ನೋಂದಾಯಿಸಿದ ನಂತರ ರನ್ಯೂವಲ್ ಅವಧಿ ಯಾವಾಗ;

ಸ್ಟಾಂಪ್ ವೆಂಡರ್ ಪರವಾನಗಿಯನ್ನು ನಿರುದ್ಯೋಗಿ ಯುವಕರಿಗೆ, ನಿವೃತ್ತ ಅಧಿಕಾರಿಗಳಿ ನೀಡಲಾಗಿದೆಯೆ;

ಪರವಾನಗಿದಾರರಿಗೆ ಸರ್ಕಾರವು ಈಗ ನೀಡುತ್ತಿರುವ ಶೇಕಡವಾರು ಮೊತ್ತವೆಷ್ಟು;

2) ಸ್ಟಾಂಪ್ ವೆಂಡರ್ ಪರವಾನಗಿದಾರರು ರಿನ್ಯೂವಲ್ ಮಾಡಿಕೊಳ್ಳುವಾಗ ಸರ್ಕಾರಕ್ಕೆ ರಿನ್ಯೂವಲ್ ಶುಲ್ಕವನ್ನು ಸಲ್ಲಿಸಬೇಕೆ;

ಹಾಗಾದರೆ ರಿನ್ಯೂವಲ್ ಮಾಡಿಕೊಳ್ಳುವ ಅಧಿಕಾರಿಗಳು ಪ್ರತಿಯೊಬ್ಬ ಪರವಾನಗಿದಾರರಿಂದ 100-200 ರೂ. ಶುಲ್ಕವನ್ನು ರಸೀದಿಯು ಇಲ್ಲದೇ ಅಕ್ರಮವಾಗಿ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಹಾಗಿದ್ದಲ್ಲಿ, ಇಂತಹ ಭ್ರಷ್ಟ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡ ಕ್ರಮವೇನು; ತಿಳಿಸುವುದು?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) :

1) 1792

ರಿನ್ಯೂವಲ್ ಅವಧಿ ಪ್ರತಿ ವರ್ಷ ಮಾರ್ಚ್ ಮಾಹೆ.

ಹೌದು

'ಎ' ಕ್ಲಾಸ್ ಸ್ಟಾಂಪ್ ವೆಂಡರ್ ಗೆ ಶೇಕಡ 2 ಕಮೀಷನ್

'ಬಿ' ಕ್ಲಾಸ್ ಸ್ಟಾಂಪ್ ವೆಂಡರ್ ಗೆ ಶೇಕಡ 3 ಕಮೀಷನ್

2) ಇಲ್ಲ

ಇಲ್ಲ

3) ಉದ್ಭವಿಸುವುದಿಲ್ಲ.

ಕೃಷಿ ಇಲಾಖೆಯಿಂದ ನಿರ್ಮಿಸುವ ಚೆಕ್ ಡ್ಯಾಮ್ ಬಂದರು ದುರಸ್ತಿ

893 (1281) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಇಲಾಖೆಯಿಂದ ನಿರ್ಮಿಸಲಾಗುತ್ತಿರುವ ಚೆಕ್ ಡ್ಯಾಂ(ಬಂದರು) ಗಳು ಕೆಲವು ಸಲ ಪ್ರವಾಹದಿಂದ ಒಡೆದುಹೋಗಿದ್ದು ಇಂತಹ ಬಂದರುಗಳ ಸಂಖ್ಯೆ ಎಷ್ಟು?

ಆ) ಇಂತಹ ಬಂದುರಗಳು ದುರಸ್ತಿಗಾಗಿ ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ಸಂಖ್ಯೆ : 7765

ಆ) ಸರ್ಕಾರದಿಂದ ದುರಸ್ತಿಗಾಗಿ ಯಾವ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿರುವುದಿಲ್ಲ. ಇಲಾಖೆಯಮತಿಯಿಂದ ನಿರ್ಮಿಸುವ ಚೆಕ್ ಡ್ಯಾಂಗಳು (ಬಂದರುಗಳು) ರೈತರ ಉಪಯೋಗಕ್ಕಾಗಿ ನಿರ್ಮಿಸುವ ಕಾಮಗಾರಿಗಳು. ಈ ಚೆಕ್ ಡ್ಯಾಂಗಳನ್ನು ಫಲಾನುಭವಿಗಳು ಅದರ ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವ ಬಗ್ಗೆ ಜವಾಬ್ದಾರರಾಗಿರುತ್ತಾರೆ. ಈ ಅಂಶದ ಬಗ್ಗೆ ಸಂಬಂಧಿಸಿದ ಜಲಾನಯನ ಸಂಘಗಳು ಹಾಗೂ ಅನುಷ್ಠಾನಗೊಳಿಸುವ ಸಂಸ್ಥೆಗಳು ಸಂಬಂಧಿಸಿದ ರೈತರಿಗೆ ಸೂಕ್ತ ಮಾರ್ಗದರ್ಶನ ಹಾಗೂ ಸಲಹೆ ಸೂಚನೆಗಳನ್ನು ನೀಡುತ್ತವೆ.